16)	'ಡಿ' ದರ್ಜಿ ನೌಕರರು	–	74
17)	ಕಂಪ್ಯೂಟರ್ ಹುದ್ದೆಗಳು	–	11
		ಒಟ್ಟು	361

ಇ) ಹುದ್ದೆಗಳು ಖಾಲಿಯಿರುವುದರಿಂದ ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯ ತಪ್ಪಿದಂತಾಗುವುದಿಲ್ಲ.

1) ಪ್ರಥಮ ದರ್ಜಿ ಸಹಾಯಕರು, ದ್ವಿತೀಯ ದರ್ಜಿ ಸಹಾಯಕರು, ಬೆರಳಚ್ಚುಗಾರರು ಮತ್ತು 'ಡಿ' ಗುಂಪಿನ ನೌಕರರ ಹುದ್ದೆಗಳನ್ನು ಇತ್ತೀಚೆಗೆ ದಿನಗೂಲಿ ನೌಕರರನ್ನು ಸಕ್ರಮಗೊಳಿಸುವ ಮೂಲಕ ತುಂಬಲಾಗುತ್ತಿದೆ.

2) ಕರ್ನಾಟಕ ಲೋಕಸೇವಾ ಆಯೋಗದಿಂದ ತುಂಬಬೇಕಾಗಿರುವ ಹುದ್ದೆಗಳ ಬಗ್ಗೆ ಆಯೋಗಕ್ಕೆ ಬರೆಯಲಾಗಿದೆ.

3) ಬಡ್ತಿಯಿಂದ ತುಂಬಬೇಕಾದ ಅಧಿಕಾರಿಗಳ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಉಪಾಧ್ಯಕ್ಷರು:- ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

(4) ವರದಿಯನ್ನು ಒಪ್ಪಿಸುವುದು (ಅಧ್ಯಕ್ಷರು, ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ):-

ಡಾ।। ಎಂ.ಪಿ. ಕರ್ಕಿ:- ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ ಹತ್ತೊಂಬತ್ತನೇ ವರದಿಯನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಉಪಾಧ್ಯಕ್ಷರು:- ವರದಿಯನ್ನು ಮಂಡಿಸಲಾಗಿದೆ.

ನಿಲುವಳಿ ಸೂಚನೆ ಮಂಡನೆ (ಅನುಮತಿ ಕೋರಿ)

ವಿಷಯ:- ಕೋಲಾರ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಕೃಷಿ ಸಚಿವರು ಸರ್ಕಾರಿ ನೌಕರರಿಗೆ ಹೊಡೆದರೆಂಬ ವರದಿ ಬಗ್ಗೆ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್):- ಮಾನ್ಯ ಅಧ್ಯಕ್ಷರೇ, ನಾನು ಇದನ್ನು ಅಡ್‌ಜರ್ನ್‌ಮೆಂಟ್ ಮೋಷನ್ ಎಂದು ಕೊಟ್ಟಿದ್ದೇನೆ. ತಾವುಗಳು ಅದನ್ನು ಯಾವರೀತಿಯಲ್ಲಿ ಟ್ರೀಟ್ ಮಾಡುತ್ತೀರೋ ಹಾಗೆ ಮಾಡಿ. ನನ್ನ ಆಡ್ಡಿ ಇಲ್ಲ. ನಾನು ಈ ವಿಚಾರವನ್ನು ಯಾವುದೇ ಒಂದು ದುರುದ್ದೇಶದಿಂದ ಪ್ರಸ್ತಾಪ ಮಾಡುತ್ತಾ ಇಲ್ಲ. ಮೊನ್ನೆ ಕೋಲಾರ ಜಿಲ್ಲಾಪರಿಷತ್‌ನಲ್ಲಿ 3ನೇ ತಾರೀಖು ಮಾನ್ಯ ಕೃಷಿ ಸಚಿವರು ಜಿಲ್ಲಾಪರಿಷತ್ ಕಛೇರಿಗೆ 3–30 ಗಂಟೆಗೆ ಸರ್‌ಪ್ರೈಸ್ ವಿಸಿಟ್‌ನ್ನು ಕೊಟ್ಟು ಅಲ್ಲಿನ ಸಿಬ್ಬಂಧಿಗಳ ಬಗ್ಗೆ ಅವರ ಅಟೆಂಡೆನ್ಸ್ ಚೆಕ್ ಮಾಡಬೇಕು, ಅವರುಗಳು ಕಛೇರಿಗೆ ಸರಿಯಾಗಿ ಬರುತ್ತಿದ್ದಾರೋ ಅಥವ ಇಲ್ಲವೋ ಎಂದು ಹೇಳಿ ಅಲ್ಲಿರತಕ್ಕಂಥ ಡೆಪ್ಯುಟಿ ಸೆಕ್ರೆಟರಿ

ಯವರಿಗೆ ಆದೇಶವನ್ನು ನೀಡಿ, ಶ್ರೀ ಮಂಜುನಾಥ ಹಾಗೂ ಶ್ರೀ ವೆಂಕಣ್ಣ ಎಂಬ ಆಫೀಸ್ ಸೂಪರಿಂಟೆಂಡೆಂಟ್‌ರುಗಳಿಗೆ ರಿಜಿಸ್ಟರ್ ತರುವುದಕ್ಕೆ ಕಳುಹಿಸಿದ ಮೇಲೆ ಆ ರಿಜಿಸ್ಟರ್‌ನ್ನು ಅವರುಗಳು ತಿದ್ದುತ್ತಾ ಇದ್ದರು ಎಂದು ಹೇಳಿ ಅವರ ಗಮನಕ್ಕೆ ತಂದಮೇಲೆ ತಮ್ಮ ಕೈಯಲ್ಲಿದ್ದಂಥ ಬಡಗಿಯಿಂದ ಒಬ್ಬ ಅಧಿಕಾರಿಗೆ ಬೆನ್ನಿನ ಮೇಲೆ ಹೊಡೆದರು ಎನ್ನತಕ್ಕಂಥಾದ್ದು, ಇನ್ನೊಬ್ಬ ಅಧಿಕಾರಿಗೆ ಕಪಾಳದ ಮೇಲೆ ಹೊಡೆದರು ಎನ್ನತಕ್ಕ ಎರಡು ವಿಚಾರಗಳ ಬಗ್ಗೆ ಪತ್ರಿಕೆಯಲ್ಲಿಯೂ ಕೂಡ ಬಂದಿದೆ. ಈ ಬಗ್ಗೆ ಇವೊತ್ತಿನ ದಿವಸ ನಾವೊಂದು ಡಿಸ್ಟಿನ್‌ಕ್ಷನ್ ಮಾಡಿಕೊಳ್ಳಬೇಕಾಗುತ್ತದೆ. ಏತಕ್ಕೆಂದರೆ ಶ್ರೀಮಾನ್ ಬೈರೇಗೌಡರ ಬಗ್ಗೆ ವೈಯಕ್ತಿಕವಾಗಿ ಅಪಾರ ಗೌರವವನ್ನು ಇಟ್ಟುಕೊಂಡವನು ನಾನು. ಅವರೊಬ್ಬ ಒಳ್ಳೆಯ ದಕ್ಷ ಸಚಿವರು, ಕೆಲಸ ಕಾರ್ಯಗಳನ್ನು ಬಹಳ ಕ್ವಿಕ್ ಆಗಿ ಮಾಡತಕ್ಕಂಥವರು. ಈ ಪ್ರಕರಣ ಹೇಗೆ ಆಗಿದೆ ಅಂದರೆ, ಮಾನ್ಯ ಶ್ರೀ ಕೆ.ಪಿ. ಗಿಲ್ ಪಂಜಾಬ್‌ನ ಪೋಲೀಸ್ ವರಿಷ್ಟಾಧಿಕಾರಿ ಬಹಳ ಎಫಿಷಿಯೆಂಟ್.

ಶ್ರೀ ಎಂ.ಸಿ. ನಾಣಯ್ಯ:- ಈ ಪ್ರಕರಣವನ್ನು ಕೆ.ಸಿ. ಗಿಲ್‌ರವರಿಗೆ ಹೋಲಿಸ ಬೇಡಿ. ತಮಗೆ ಕೈಮುಗಿದು ಹೇಳುತ್ತೇನೆ. ಆ ರೀತಿ ಹೋಲಿಕೆ ಮಾಡಬೇಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅಧ್ಯಕ್ಷರೇ, ನಾನು ಈಲ್ಡ್ ಆಗಿಲ್ಲ. . .

ಉಪಾಧ್ಯಕ್ಷರು:- ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಏನೋ ಹೇಳಬೇಕೆಂದಿದ್ದಾರೆ. . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈ ವಿಚಾರದಲ್ಲಿ ಪಾಯಿಂಟ್ ಆಫ್ ಆರ್ಡರ್ ಇತ್ಯಾದಿ ಏನೂ ಇಲ್ಲ. ನಾನು ಹೇಳುತ್ತಿರುವುದೇನೆಂದರೆ, ಒಬ್ಬ ಪೋಲೀಸ್ ಅಧಿಕಾರಿ ಪಂಜಾಬ್‌ನಲ್ಲಿ ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆಂದು ಬಹಳ ಮಟ್ಟಿಗೆ ಮೆಚ್ಚಿಕೊಂಡರು. ಆದರೆ ಅವನು ಒಂದು ತಪ್ಪು ಮಾಡಿದ್ದಕ್ಕಾಗಿ ಕಾಕ್‌ಟೇಲ್ ಪಾರ್ಟಿಯಲ್ಲಿ ನಡೆದುಕೊಂಡ ರೀತಿಯಲ್ಲಿ ಏನೋ ತಪ್ಪಾಗಿದೆ ಎಂಬ ಪ್ರಕರಣದ ಬಗ್ಗೆ ಮೊನ್ನೆ ಸುಪ್ರೀಂಕೋರ್ಟ್‌ನವರು ಶಿಕ್ಷೆ ವಿಧಿಸಿದ್ದಾರೆ. ಕೊನೆಗೆ ಏನಾಯಿತೆಂದರೆ ಇವೊತ್ತಿನ ದಿವಸ ಅವರು ಐದು ತಿಂಗಳ ಶಿಕ್ಷೆಯನ್ನು ಅನುಭವಿಸಬೇಕಾಗಿದೆ. ನಾನು ವ್ಯಕ್ತಿವಿಚಾರದಲ್ಲಿ ಹೇಳುತ್ತಿದ್ದೇನೆ ಅಷ್ಟೆ. ಉದಾಹರಣೆಗೆ ಹೇಳುವುದಾದರೆ ಇಂದಿರಾಗಾಂಧೀಜಿಯವರ ಕೊಲೆಯನ್ನು ಅವರ ಗನ್‌ಮೆನ್ ಮಾಡಿದ. ಹೀಗೆ ಕೊಲೆ ಮಾಡಿದ ತಕ್ಷಣ ಬೇರೆಯವರು ಆತನನ್ನು ಕೊಲೆ ಮಾಡಲಿಲ್ಲ. ಕಾನೂನು ಪ್ರಕಾರ ಅವರ ಮೇಲೆ ಚಾರ್ಜ್‌ಶೀಟ್ ಹಾಕಿ ಕ್ರಮ ತೆಗೆದುಕೊಂಡು ಆಮೇಲೆ ಸುಮಾರು 7–8ವರ್ಷಗಳ ಕಾಲ ನಡೆದ ಮೇಲೆ ಆಪಾದಿತರನ್ನು ಶೂಲಕ್ಕೆ ಏರಿಸಿದರು. ಆದುದರಿಂದ ನಮ್ಮ ಪಾರ್ಲಿಮೆಂಟರಿ ಪ್ರೋಸೀಜರ್‌ನಲ್ಲಿ ಕೆಲವು ಕಾನೂನುಗಳಿವೆ. ಯಾವ ರೀತಿಯಾಗಿ ಮಂತ್ರಿಗಳು ನಡೆದುಕೊಳ್ಳಬೇಕು ಯಾವ ರೀತಿಯಾಗಿ ನಮ್ಮ ಅಧಿಕಾರಿಗಳು ನಡೆದುಕೊಳ್ಳಬೇಕೆನ್ನುವುದು ಇದೆ. ಇವೊತ್ತು ನೀವು ಸರ್‌ಪ್ರೈಸ್ ವಿಸಿಟ್ ಮಾಡತಕ್ಕಂಥಾದ್ದು ಒಳ್ಳೆಯ ವಿಚಾರ. ಏಕೆಂದರೆ ಅನೇಕ ಅಧಿಕಾರಿಗಳು ಕಛೇರಿಗೆ ಹೋಗುವುದೇ ಇಲ್ಲ. ಕೆಲವು ಸಲವಂತೂ ಶುಕ್ರವಾರ ರಜೆ

ಹಾಕಿದರೆ ತಿರುಗಿ ಅವರು ಬರುವುದು ಸೋಮವಾರ ಮಧ್ಯಾಹ್ನದ ಮೇಲೆ. ಅಂಥವರನ್ನು ನಾನು ಡಿಫೆಂಡ್ ಮಾಡುತ್ತಾ ಇಲ್ಲ. ಇಲ್ಲಿ ನಮ್ಮ ನಡುವಳಿಕೆ ಮಂತ್ರಿಯಾಗಿ ಹೇಗಿರಬೇಕೆಂಬ ವಿಚಾರ ಬರುತ್ತದೆ. ಒಂದು ರಾಜ್ಯವನ್ನು ನಾವು ಆಳುವಾಗ ಯಾವ ರೀತಿಯಾಗಿ ನಡೆದುಕೊಳ್ಳಬೇಕೆನ್ನುವ ವಿಚಾರವು ಅತಿ ಮುಖ್ಯವಾದುದು. ಯಾವುದೋ ಒಬ್ಬ ಅಧಿಕಾರಿಗೆ ಕಪಾಳಕ್ಕೆ, ಬೆನ್ನಿನ ಮೇಲೆ ಹೊಡೆದಿದ್ದಾರೆ ಎಂಬುದಕ್ಕೆ ನಾನು ಡಿಫೆಂಡ್ ಮಾಡುತ್ತಾ ಇಲ್ಲ. ಒಂದು ತಪ್ಪಾಗಿದ್ದರೆ ಮಂತ್ರಿಯಾಗಿದ್ದವರು ಕಾನೂನನ್ನು ತನ್ನ ಕೈಯಲ್ಲಿ ತೆಗೆದುಕೊಂಡು ನೇರವಾಗಿ ತಾನೇ ಶಿಕ್ಷೆಯನ್ನು ಕೊಡಬಹುದೇ? ಪ್ರಜಾಪ್ರಭುತ್ವದಲ್ಲಿ ಹೀಗೆ ಮೊದಲು ಅವಕಾಶವಿದೆಯೇ ಎಂದು ನೋಡಬೇಕಾಗುತ್ತದೆ. ಏಕೆಂದರೆ ಯಾರೋ ಒಬ್ಬ ತಪ್ಪು ಮಾಡಿದ್ದರೆ, ಯಾರೋ ಒಬ್ಬ ಅಬ್ಸೆಂಟ್ ಇದ್ದರೆ, ಯಾರೋ ಒಬ್ಬ ಕರಪ್ಟ್ ಇದ್ದರೆ, ಯಾರೇ ಒಬ್ಬರು ಲೇಜೀ ಇದ್ದರೆ, ಯಾರೇ ಒಬ್ಬರು ನಿಮ್ಮ ಇನ್ಸ್ಟ್ರಕ್ಷನ್ಸ್ ವಿರುದ್ಧ ಕೆಲಸ ಮಾಡತಕ್ಕಂಥವರು ಇದ್ದರೆ, ಅಂಥವರ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕಂಥಾದ್ದರ ಬಗ್ಗೆ ಕೆಲವು ನಿರ್ದಿಷ್ಟ ಕ್ರಮಗಳಿವೆ. ಅಂಥವರ ಮೇಲೆ ಸಸ್ಪೆನ್ಕ್ಷನ್, ಡಿಸಿಪ್ಲಿನರಿ action, ಶೋಕಾಸ್ ನೋಟೀಸ್, ಡಿಸ್ಮಿಸಲ್, ಕಂಪಲ್ಸರಿ ರಿಟೈರ್‌ಮೆಂಟ್ ಮುಂತಾಗಿ ಹಲವಾರು ಪ್ರೋಸೀಜರ್‌ಗಳು ಇವೆ. ಅದರ ಪ್ರಕಾರ ಕ್ರಮ ಜರುಗಿಸ ಬಹುದು. ಈ ಕಾನೂನುಗಳನ್ನು ನಾವೇ ಮಾಡಿಕೊಂಡಿದ್ದೇವೆ. ಸಿವಿಲ್‌ಸರ್ವೆಂಟ್ಸ್ ಹೇಗೆ ಇರಬೇಕು, ಅವರ ಜವಾಬ್ದಾರಿಗಳು ಏನು? ತಪ್ಪು ಮಾಡಿದರೆ ಅವರಿಗೆ ಯಾವ ರೀತಿಯಲ್ಲಿ ಶಿಕ್ಷೆ ಕೊಡಬೇಕೆನ್ನತಕ್ಕಂಥಾದ್ದುದರ ಬಗ್ಗೆ ನಿಯಮಗಳನ್ನು ನಾವೇ ಮಾಡಿಕೊಂಡಿದ್ದೇವೆ. ಇನ್ನೊಂದು ಕಡೆಯಲ್ಲಿ ನಾವುಗಳು ಹೇಗೆ ಇರಬೇಕು, ನಮಗೆ ಏನು ಅಧಿಕಾರ – ಎನ್ನತಕ್ಕಂಥಾದ್ದು ಕೂಡ ಬಿಸಿನೆಸ್ ಟ್ರಾನ್ಸ್ಯಾಕ್ಷನ್ ಆಫ್ ರೂಲ್ಸ್ ಸೆಕ್ರೆಟರಿಯೇಟ್ – ಎಂದು ನಮಗೂ ಕೂಡ ಇದೆ. ಹೀಗಿರುವಾಗ ನಮ್ಮ ಅಧಿಕಾರವನ್ನು ಚಲಾಯಿಸುವುದಕ್ಕೋಸ್ಕರವಾಗಿ ಸರ್‌ಪ್ರೈಸ್ ವಿಸಿಟ್‌ನ ನೆಪದಲ್ಲಿ ಈ ಕೆಲಸವನ್ನು ಮಾಡಬಹುದೇ? ಹೇಗೆ? ಏಕೆಂದರೆ ಕೊನೆಗೆ ಆದಾದಮೇಲೆ ಕಪಾಳಮೋಕ್ಷ ಮತ್ತು ಕಟ್ಟಿಗೆಯಿಂದ ಅವರು ಹೊಡೆದರು ಎಂದು ಪತ್ರಿಕೆಗಳಲ್ಲಿ ಬಂದಿದೆ. ಇದಾದ ಮೇಲೆ ಸ್ಟ್ರೈಕ್ ಮಾಡಿದರು. ಒಂದು ದಿವಸದ ಕಾಲ ಕಛೇರಿಗಳನ್ನು ಬಂದ್ ಮಾಡಿದರು. ಕೊನೆಗೆ ಇವರೂ, ಅವರೂ ಸೇರಿ ರಾಜೀಸೂತ್ರಕ್ಕೆ ಬಂದರು. ಅಲ್ಲಿ ಈಗ ಶಾಂತಿ ಇದೆ. ಆದುದರಿಂದ ನಾನು ಇಲ್ಲಿ ಆ ಕುರಿತು ಮತ್ತೆ ಪ್ರಚೋದನೆ ಮಾಡುವುದಾಗಲೀ, ಅಥವಾ ಅಂಥಾದ್ದನ್ನು ಪುನಃ ಮಾಡಿ ಎಂದಾಗಲೀ ನಾನು ಸರ್ವಥಾ ಹೇಳುವುದಿಲ್ಲ. ಇವ್ಹೊತ್ತು ನಾವು ಮಂತ್ರಿಗಳಾದವರು, ಅದರಲ್ಲಿಯೂ ತಾವುಗಳು ಹಿರಿಯ ಮಂತ್ರಿಗಳು ಹೇಗೆ ವರ್ತಿಸಬೇಕು; ತಮ್ಮನ್ನು ನೋಡಿಕೊಂಡು ಇನ್ನುಳಿದ ಮಂತ್ರಿಗಳು ಕೂಡ ತಮ್ಮ ನೀತಿಯನ್ನು ಫಾಲೋ ಮಾಡಬಾರದು. ನಮ್ಮ ಹಿರಿಯಮಂತ್ರಿಗಳೇ ಸರಕಾರಿ ನೌಕರರ ಕಪಾಳಕ್ಕೆ ಹೊಡೆದಿದ್ದಾರೆ ಎಂಬ ಒಂದು ವಿಚಾರ ಅವರ ಮನಸ್ಸಿಗೂ ಬರಬಾರದು. ಅವರು ಕಪಾಳಕ್ಕೆ ಹೊಡೆದಿದ್ದಾರೆ ಎಂದ ಮೇಲೆ ನಾನು ಏಕೆ ಲಾಠಿ ತೆಗೆದುಕೊಂಡು ಹೊಡೆಯಬಾರದು ಅಥವಾ ಗನ್‌ಮೆನ್ ಹತ್ತಿರ ಇರುವ ಗನ್ ತೆಗೆದುಕೊಂಡು ಏಕೆ ಹೊಡೆಯಬಾರದು ಎಂಬ ಒಂದು ರೀತಿಯ ಭ್ರಮೆ ಯಾರಲ್ಲಿಯೂ ಬರಬಾರದು. ಕೆಟ್ಟ ಕೆಲಸವನ್ನು

ಒಬ್ಬ ಸಿಬ್ಬಂದಿ ಮಾಡಿದ್ದಾನೆ ಎಂದ ಕೂಡಲೇ ಅವನಿಗೆ ನೀವೇ ಶಿಕ್ಷೆ ಕೊಡಲು ಬರುವುದಿಲ್ಲ. ಶಿಕ್ಷೆ-ಯನ್ನು ಕೊಡತಕ್ಕಂಥ ಬೇರೆ ಬೇರೆ ವಿಧಾನಗಳು ನಿಗದಿತವಾಗಿವೆ. ಆ ಕಾನೂನುಗಳ ಮುಖಾಂತರ ಸಂಬಂಧಪಟ್ಟವರಿಗೆ ಶಿಕ್ಷೆ ಕೊಡುವುದಾದರೆ ಅದಕ್ಕೆ ಯಾರೂ ಬೇಡ ಎಂದು ಹೇಳುವುದಿಲ್ಲ. ಆದರೆ ಈ ತರಹದ ಒಂದು ಕೆಲಸ ಕೋಲಾರದಲ್ಲಿ ನಡೆದಿದೆ. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಮಾನ್ಯ ಕೃಷಿ ಸಚಿವರೂ ಆದ ಶ್ರೀ ಸಿ. ಬೈರೇಗೌಡರು ಶನಿವಾರ ಮಧ್ಯಾಹ್ನ 3–30ರ ಹೊತ್ತಿಗೆ ಜಿಲ್ಲಾ ಪಂಚಾಯತ್ ಕಛೇರಿಗೆ ಅನಿರೀಕ್ಷಿತ ಭೇಟಿ ನೀಡಿದರು. ನೌಕರರ ಹಾಜಾರಾತಿ ಪುಸ್ತಕವನ್ನು ತರು-ವಂತೆ ಸೂಚಿಸಿದರು. ಹಾಜರಾತಿ ಪುಸ್ತಕವನ್ನು ತರುವುದರೊಳಗೆ ಕಛೇರಿಯ ಆಡಳಿತ ಶಾಖೆಗೆ ಬಂದ ಸಚಿವರು ಸೂಪರಿಂಟೆಂಡೆಂಟ್ ಶ್ರೀ ಹೆಚ್.ಟಿ. ವೆಂಕಣ್ಣ – ಅವರಿಗೆ ಬೆನ್ನ ಮೇಲೆ ಬೆತ್ತದಿಂದ ಹೊಡೆದರು. ಹಾಗೂ ಮತ್ತೊಬ್ಬ ಸುಪರಿಂಟೆಂಡೆಂಟ್ ಶ್ರೀ ಮಂಜುನಾಥಯ್ಯ ಅವರಿಗೆ ಕಪಾಳಕ್ಕೆ ಹೊಡೆದರು ಎಂದು ನೌಕರರು ಆಪಾದಿಸಿದ್ದಾರೆ. ಅದಕ್ಕೆ ಉತ್ತರವಾಗಿ ಮಾನ್ಯ ಸಚಿವರು ಕೂಡ ಹೇಳಿದ್ದಾರೆ. "ನಾನು ಮನುಷ್ಯನೇ. ತಪ್ಪು ಮಾಡಿದವರನ್ನು ಕೇಳುವುದು ತಪ್ಪೇ? ಅವರು ಏನು ಮಾಡುತ್ತಾರೆ ಎಂದು ನಾನು ನೋಡುತ್ತೇನೆ" ಎಂದು ಬೈರೇಗೌಡರು ನುಡಿದರು. ಅಂದರೆ ಈ ಮಾತನ್ನೂ ಕೂಡ ಇವರು ಹೇಳಿದ್ದಾರೆ. ಅಂದರೆ ತಪ್ಪು ಮಾಡಿದ್ದಾರೆ, ನಾನು ಹೊಡೆದಿದ್ದೇನೆ ಎಂದು ಹೇಳಿದ ಹಾಗೆ ಆಯಿತು. ಅವರು ಏನು ಮಾಡುತ್ತಾರೋ ನಾನು ನೋಡಿಕೊಳ್ಳುತ್ತೇನೆ ಎನ್ನತಕ್ಕಂಥ ಧಾಟಿಯಲ್ಲಿ ಈ ವಿಚಾರ ಬಂದಿದೆ.

4.40 ಪಿ.ಎಂ.

ಕಾಲ್ ಮತ್ತು ಶಕ್ದರ್ ಪ್ರಕಾರ ಪಾರ್ಲಿಮೆಂಟರಿ ಡೆಮೊಕ್ರಸಿಯಲ್ಲಿ ಮಂತ್ರಿಗಳ ಜವಾಬ್ದಾರಿ ಏನು ಸರ್ಕಾರಿ ನೌಕರರ ಜವಾಬ್ದಾರಿ ಏನು ಎಂದು ಸ್ಪಷ್ಟಪಡಿಸಿದ್ದಾರೆ. ಸಚಿವರು ಯಾವಾಗಲೂ ನೌಕರರ ಜೊತೆಯಲ್ಲಿ ಕೆಲಸ ಮಾಡತಕ್ಕದ್ದು Civil Servants, they always help Ministers. ಏಕೆಂದರೆ ಎಲ್ಲಾ ಸಚಿವರು ಎಲ್ಲಾ ವಿಷಯಗಳಲ್ಲಿ ಪರಿಣತರೇನೂ ಇರುವುದಿಲ್ಲ. ಇವರು ಇವತ್ತು ಕೃಷಿ ಸಚಿವರು. ಇವರಿಗೆ ಅದರಲ್ಲಿ ಹೆಚ್ಚಿನ ಮಾಹಿತಿ ಏಕೆ ಇದೆ ಎಂದರೆ ಅವರಿಗೆ ಕೃಷಿ ಮೇಲೆ ಹೆಚ್ಚು ಪ್ರೀತಿ, ಹೆಚ್ಚು ಜ್ಞಾನ ಪಡೆದುಕೊಂಡಿದ್ದಕ್ಕಾಗಿ ಬಹುಶಃ ನಿಮಗೆ ಬೇರೆಯವರ ಅಸಿಸ್ಟೆನ್ಸ್ ಬೇಕಾಗಿಲ್ಲ. ಆದರೆ ಕೆಲವು ತಾಂತ್ರಿಕ ವಿಷಯಗಳೂ ಇವೆ, ನಾಳೆ ನೀವು ಪಿಡಬ್ಲುಡಿ ಸಚಿವರಾದಾಗ ತಾಂತ್ರಿಕ ವಿಷಯ-ಗಳನ್ನು ಕೇಳಿಕೊಳ್ಳಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ ತಮ್ಮ ಸಂಬಂಧ ಹೇಗಿರುತ್ತದೆ ಎಂಬ ಬಗ್ಗೆ Parliament and Civil Service chapter 33ರಲ್ಲಿ ಸ್ಪಷ್ಟಪಡಿಸಿದ್ದಾರೆ. The essence of Parliamentary Government specially where the franchise in democracy is the appointment of Ministers who may or may not be well versed in the art of administration in position of considerable administrative power in the nature of things before a Minister has had time to learn all the intricacies of his office, he may be stepped

up to some new department. A Minister cannot discharge his responsibilities satisfactorily, without the constant assistance by the Officers of his Ministry. The Minister has by and large to work with and through them. ಅಂದರೆ ಯಾರೇ ಸಚಿವರಾಗಿರಲಿ ಅವರ ಜೊತೆಯಲ್ಲೇ ಹೋಗಬೇಕಾಗುತ್ತದೆ. ಅವರ ಸಹಾಯ ಪಡೆದುಕೊಳ್ಳಬೇಕಾಗುತ್ತದೆ. ನಮ್ಮ ಆಡಳಿತ ನಡೆಸಬೇಕಾಗುತ್ತದೆ ಮತ್ತು ತಪ್ಪಾದಾಗ ಅದಕ್ಕೆ ಏನು ಶಿಕ್ಷೆ ಕೊಡಬೇಕೆಂಬ ಬಗ್ಗೆ ರೂಲ್ಸಿದೆ, ಅದು ಒಂದು ಕಡೆ. ನಾಳೆ ಈ ಪ್ರವೃತ್ತಿ ಬೆಳೆದರೆ ಏನಾಗುತ್ತದೆ ಇಡೀ ರಾಜ್ಯದಲ್ಲಿ ಸರ್ಕಾರಿ ನೌಕರರಲ್ಲಿ ಇವರು ಹೊಡೆದರು ಇನ್ನೊಬ್ಬರು ಬಂದು ಏನು ಮಾಡುತ್ತಾರೋ ಎಂದು ಕೆಲವೊಮ್ಮೆ ಕಾನೂನು ಅಥವಾ ಪಾಲಿಸಿಗೆ ವಿರುದ್ಧವಾಗಿ ನೀವು ಹಾಕಿಕೊಟ್ಟ ಮಾರ್ಗಸೂಚಿ ವಿರುದ್ಧವಾಗಿ ಕೆಲಸ ಮಾಡಿಸಿಕೊಳ್ಳುವ ಪ್ರವೃತ್ತಿ ಬರುತ್ತದೆ. ಆಗ ಕಾನೂನಿನ ವಿರುದ್ಧದ ಕೆಲಸ ಇದು ಎಂದು ಯಾರಾದರೂ ನೋಟ್ ಕೊಟ್ಟರೆ ಇದನ್ನು ಮಾಡಲಿಲ್ಲವೆಂದರೆ ಸಚಿವರು ನನಗೆ ಕಪಾಳಮೋಕ್ಷ ಮಾಡುತ್ತಾರೋ ಎಂಬ ಭೀತಿ ಬರುವ ಸಾಧ್ಯತೆ ಇದೆ. ಇದಕ್ಕಾಗಿ ಒಂದು ಕೋಡ್ ಆಫ್ ಕಂಡಕ್ಟ್ ಇದ್ದರೂ ಏಕೆ ಈ ಪರಿಸ್ಥಿತಿ, ಕೋಲಾರ ಜಿಲ್ಲೆಯಲ್ಲಿ, ಅದೂ ಒಬ್ಬ ಅನುಭವಿ ಸಚಿವರಿಗೆ ಬಂತು ಎಂಬುದೇ ಇನ್ನೂ ನನಗೆ ಅರ್ಥವಾಗುತ್ತಿಲ್ಲ. ಎರಡನೆಯದಾಗಿ politically, the civil servants are free.

ಉಪಾಧ್ಯಕ್ಷರು:- ಶೂನ್ಯವೇಳೆಯಲ್ಲಿ ನೀವು ಪ್ರಸ್ತಾಪಿಸುತ್ತಿದ್ದೀರಿ, ನಾನು ಮೊದಲೇ ಹೇಳಿದೆ ಬಹಳ ಜನ ಇದ್ದಾರೆ; ಎರಡೆರಡು ನಿಮಿಷ ಮಾತನಾಡಬೇಕೆಂದು. ತಾವು ಪ್ರಸ್ತಾಪ ಮಾಡಿದ್ದೀರಿ, ಸಚಿವರು ಈಗ ಉತ್ತರಿಸುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ:- ನಾನು ಕ್ರಿಯಾಲೋಪ ಎತ್ತುತ್ತೇನೆ. Where is the cause of action? ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರು ಸಚಿವರಾದ ಭೈರೇಗೌಡರಿಗೆ ಸಂಬಂಧಿಸಿದಂತೆ ಒಂದು ವಿಚಾರ ಎತ್ತಿದ್ದಾರೆ. ಅವರು ಹೇಳುತ್ತಿರುವುದು ಕಾನೂನಿದೆ. ಆ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು. ಹೌದು, ಭೈರೇಗೌಡರು ಮಾಡಿದರು ಎನ್ನಲಾದ ಕೆಲವು ವಿಚಾರಗಳು ಪತ್ರಿಕೆಯಲ್ಲಿ ಬಂತು. ಆದಾದಮೇಲೆ ಆವರಿಗೂ ಇವರಿಗೂ ವಿಷಯದ ಬಗ್ಗೆ ಸಮಾಧಾನವಾಯಿತು ಅಂತಲೂ ಬಂತು. ಅಲ್ಲಿಗೆ ಅದು ಮುಗಿಯಿತು. ಎಲ್ಲರೂ ಪತ್ರಿಕೆಯಲ್ಲಿ ನಾವು ಕೇಳಿರುವುದು. ಕಾನೂನು ಪ್ರಕಾರ ಇದ್ದರೆ ಅಗ್ರೀವ್ಡ್ ಪಾರ್ಟಿ ಎನ್ನುವವರು ವಿಷಯವನ್ನು ಪರ್‌ಸ್ಯೂ ಮಾಡಿದ್ದರೆ ಅದೇನಾದರೂ ಉಲ್ಬಣಗೊಂಡಿದ್ದರೆ ಅದರಿಂದ ಆಡಳಿತದ ಮೇಲೆ ಪರಿಣಾಮ ಆಗುವುದೇನಾದರೂ ಇದ್ದರೆ ಇವರು ಬಹುಶಃ ಎತ್ತಬಹುದು. ಇದ್ಯಾವುದೂ ಇಲ್ಲದೆ ಸಂಪೂರ್ಣ ಶಮನವಾಗಿರುವುದನ್ನು ಇಲ್ಲಿ ಎತ್ತುವುದಕ್ಕೆ ಕಾಸ್ ಆಫ್ ಆಕ್ಷನ್ ಏನು? ಯಾವುದರ ಮೇಲೆ ನೀವು ಎತ್ತಿದ್ದೀರಿ? ಪತ್ರಿಕೆಯಲ್ಲಿ ಬಂದಿರುವುದೇ ನಿಮಗೆ ಆಧಾರವೇ? ಹಾಗಾದರೆ ಪತ್ರಿಕೆಯಲ್ಲಿ ಬಂದಿರುವುದು ಸರಿಯಲ್ಲವೆಂದು ಸಚಿವರು ಹೇಳಿದ್ದಾರೆ. ಇನ್ನೂ ಸಭೆಯಲ್ಲಿ ಇದನ್ನು ಚರ್ಚಿಸಬೇಕೇ? ದಯವಿಟ್ಟು ಹೇಳಿ. ನಾವು ಎಲ್ಲಿಗೆ ಹೋಗುತ್ತಿದ್ದೇವೆಂದು ನನಗಿನ್ನೂ ಅರ್ಥವಾಗುತ್ತಿಲ್ಲ. ಕಾನೂನು ಪ್ರಕಾರ ಕೈಗೊಳ್ಳುವಂತಿದ್ದರೆ ಕಾನೂನಿನಡಿಯಲ್ಲಿ ಏನಾದರೂ

ಇದು ಇದೆಯಾ? ಹಾಗಿಲ್ಲದೆ ಹೋದಾಗ ಇಲ್ಲಿ ಅದನ್ನು ಚರ್ಚಿಸುವ ಅವಶ್ಯಕತೆಯಾದರೂ ಏನು? ಸಭಾಧ್ಯಕ್ಷರೇ, ನನ್ನ ಕ್ರಿಯಾಲೋಪದ ಬಗ್ಗೆ ದಯವಿಟ್ಟು ತಾವು ವಿಚಾರ ಮಾಡಬೇಕಾಗುತ್ತದೆ. ಅವರೇ ಹೇಳಿದರು ಇವತ್ತಿನ ನಮ್ಮ ಬ್ಯೂರೋಕ್ರಾಟಿಕ್ ಸಿಸ್ಟಂನಲ್ಲಿನ ಲೆತರ್ಜಿ ಬಗ್ಗೆ ಹೇಳಿದರು. ಆಮೇಲೆ ಸಚಿವರು ಪತ್ರಿಕೆಯಲ್ಲಿ ಬಂದಿರುವುದು ನಡೆದಿಲ್ಲವೆಂದು ಹೇಳಿಯಾದ ಮೇಲೆ ಬಹುಶಃ ಆ ವಿಷಯವೇ ಇಲ್ಲದಿರುವಾಗ ಪುನಃ ಸದನದಲ್ಲಿ ಈ ವಿಷಯವನ್ನು ಚರ್ಚೆವಸ್ತುವನ್ನಾಗಿ ಮಾಡುವುದು ಸರಿಯೇ?

ಉಪಾಧ್ಯಕ್ಷರು:- ಪತ್ರಿಕೆ ಆಧರಿಸಿ, ಆದೆಲ್ಲಾ ಸರಿಯಾಗಿದೆ ಎಂದು ಪತ್ರಿಕೆಯಲ್ಲೇ ಪುನಃ ಬಂದ ಮೇಲೆ ಈಗ ಪ್ರಸ್ತಾಪಿಸುತ್ತಿರುವುದನ್ನು ಇಲ್ಲಿಗೇ ಕೈಬಿಡುವುದು ಒಳ್ಳೆಯದೆಂದು ನನಗೆ ಅನ್ನಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಎಲ್ಲಾ ಪತ್ರಿಕೆಯಲ್ಲಿ ಬಂದಿದೆ, ಅಲ್ಲಿನ ಜನರೂ ನಮಗೆ ಹೇಳಿದ್ದಾರೆ ಇವತ್ತು ನಾವು ಸ್ಟ್ರೈಕ್ ಮಾಡುತ್ತೇವೆ, ಎನ್‌ಜಿಓಗಳಲ್ಲಿ ಸ್ಟ್ರೈಕ್ ಮಾಡಲು ನಿರ್ಣಯ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ, ಇಲ್ಲಿರುವ ಅವರ ಅಧ್ಯಕ್ಷರೂ ಅಲ್ಲಿಗೆ ಹೋಗಿದ್ದಾರೆ, ಅದಕ್ಕೆ ಸಾಕ್ಷಿಯಾಗಿ ರಾಜಿ ಮಾಡಿಸಲು ಸ್ಥಳೀಯ ಶಾಸಕರೂ ಅಲ್ಲಿದ್ದರು; ಸುಮ್ಮನೆ ನೀವು ಕಾಸ್ ಆಫ್ ಆಕ್ಷನ್ ಎನ್ನುತ್ತೀರಿ, ನಾನು ಹೇಳಬಾರದು ಅಂತಿದ್ದೆ. ಆದರಲ್ಲಿ ಕೃಷ್ಣಾರೆಡ್ಡಿ, ಶ್ರೀರಾಮ ರೆಡ್ಡಿ, ರಾಜೇಂದ್ರನ್, ಇವರೆಲ್ಲರೂ ಇದ್ದರು ಎಂದು ಬಂದಿದೆ.

(ಗೊಂದಲ)

SRI M. MALLIKARJUNA KHARGE:- The entire administration will be demoralised.

ಶ್ರೀ ಎಂ.ಸಿ. ನಾಣಯ್ಯ:- ಕಾನೂನಿನ ಪ್ರಕಾರ ಕ್ರಮ ಜರುಗಿಸಬೇಕಾಗಿದ್ದರೆ ಆ ರೀತಿ ಆಗಲಿ. ಆದರೆ ಯಾವ ಕಾನೂನಿನಂತೆ ಇದು ಇಲ್ಲ ಎಂದಾದಮೇಲೆ ನೀವ್ಯಾಕೆ ಎತ್ತಿದಿರಿ? ದಯವಿಟ್ಟು ಹೇಳಿ. ಸ್ವಾಮಿ ಇದನ್ನು ಸದನದಲ್ಲಿ ಚರ್ಚಿಸಲಿಕ್ಕೆ ಅವಕಾಶ ಕೊಡಕೂಡದು.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಉಪಾಧ್ಯಕ್ಷರೇ, How the Minister and the Civil Servant should act according to this and according to the rules of procedure. ಎಂಬ ಮಾತನ್ನು ನಾನು ಮಂಡಿಸುತ್ತಿದ್ದೇನೆ.

(INTERRUPTIONS)

SRI M.C. NANAIAH:- We need not have to learn that from anybody.You were also there in the Government.

ಶ್ರೀ ವಾಟಾಳ್ ನಾಗರಾಜ್:- ಖರ್ಗೆಯವರು ಹೇಳುವುದೆಲ್ಲಾ ಹೇಳಲಿ, ಸ್ವಲ್ಪ ಶಾಂತವಾಗಿ ಕುಳಿತುಕೊಳ್ಳಿ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಎರಡು ನಿಮಿಷದಲ್ಲಿ ಮುಗಿಸುತ್ತೇನೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ:- ಕೃಷ್ಣಾರೆಡ್ಡಿಯವರು ಇದ್ದರೆಂದು ತಾವು ಹೇಳಿದ್ದೀರಿ. ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ.

ಶ್ರೀ ಎಂ.ನಾರಾಯಣಸ್ವಾಮಿ:- ಮಾನ್ಯ ಸಭಾಧ್ಯಕ್ಷರೇ, ನನ್ನದು ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಈಲ್ಡ್ ಆಗಿದ್ದುದು ಮಂತ್ರಿಗಳಿಗೆ. ಮಂತ್ರಿಗಳು ಮಾತನಾಡದಿದ್ದರೆ ನಾನು ಮಾತನಾಡಬೇಕಾಗುತ್ತದೆ. ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ಪಾಯಿಂಟ್ ಆಫ್ ಆರ್ಡರ್ ಪದೇ ಪದೇ ಬರುವುದಿಲ್ಲ. ಶೂನ್ಯ ವೇಳೆಯಲ್ಲಿ ಎಂದು ತಾವು ಹೇಳಿದರೆ ಶೂನ್ಯ ವೇಳೆಯಲ್ಲಿಯೂ ಕೂಡ ಈ ಪ್ರಶ್ನೆ ಬರುವುದಿಲ್ಲ.

ಉಪಾಧ್ಯಕ್ಷರು:- ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಬರುವುದಿಲ್ಲ.

ಶ್ರೀ ಕೆ.ಎಂ ಕೃಷ್ಣಾರೆಡ್ಡಿ:- ನಾನು ಈ ಘಟನೆಯ ಬಗ್ಗೆ ಅಲ್ಲ; ಯಾವುದೇ ಘಟನೆ ನಡೆದಾಗ ಸೌಹಾರ್ದಯುತವಾಗಿ ಅದು ಬಗೆಹರಿದಾಗ, ಯಾರಾದರೂ ಅಫೆಕ್ಟೆಡ್ ಪಾರ್ಟಿ ತಮ್ಮ ಹತ್ತಿರ ಬಂದು ದೂರು ಹೇಳಿದಾಗ ಇಲ್ಲವೇ ಮುಷ್ಕರ ಮುಂದುವರಿದಿದ್ದರೆ ಅದನ್ನು ತಾವು ಇಲ್ಲಿ ಪ್ರಸ್ತಾಪ ಮಾಡಬಹುದಾಗಿತ್ತು. ತಾವು ಅನುಭವಸ್ಥರಿದ್ದೀರಿ ಎಷ್ಟೋ ಘಟನೆಗಳು ನಡೆದಿವೆ. ತಾವು ಹೇಳ-ತಕ್ಕಂತಹ ರೀತಿಯಲ್ಲಿ ನೋಡಿದರೆ ಬೈರೇಗೌಡರು ಕಪಾಳಕ್ಕೆ ಹೊಡೆದಿದ್ದಾರೆಂಬ ಭಾವನೆ ಬರುತ್ತದೆ. ಆ ಘಟನೆ ಮುಗಿದಿದೆ. ಯಾರೂ ಅದನ್ನು ಪ್ರಸ್ತಾಪ ಮಾಡುತ್ತಿಲ್ಲ. ಅಥವಾ ಮುಷ್ಕರ ಮುಂದುವರಿ-ಸುತ್ತಿಲ್ಲ. ಅದು ಶಾಂತಿಯುತವಾಗಿ ಬಗೆಹರಿದಿದೆ. ರಾಜ್ಯ ಮಟ್ಟದ ಪದಾಧಿಕಾರಿಗಳು ಬಂದಿದ್ದರು. ನಾನೂ ಕೂಡ ಇದ್ದೆ. ಕಹಿ ವಾತಾವರಣ ತಿಳಿಯಾದಾಗ ಮತ್ತೆ ಅದನ್ನು ಎತ್ತುವುದು ಸರಿಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಅದನ್ನು ತಾವು ಸ್ವಲ್ಪ ಅವರಿಗೆ ಹೇಳಿ.

ಉಪಾಧ್ಯಕ್ಷರು:- ಈಗಾಗಲೇ ನಾನು ತಮಗೆ ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಶೂನ್ಯ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಇಲ್ಲ-ವೆಂದು ತಾವು ರೂಲಿಂಗ್ ಕೊಟ್ಟಿದ್ದೀರಿ. ಕಾನೂನು ಮಂತ್ರಿಗಳು ಮತ್ತೆ ಮತ್ತೆ ಮಾತನಾಡುತ್ತಿದ್ದಾರೆ. ಅದು ನನಗೂ ನಿಮಗೂ ಅನ್ವಯವಾಗುತ್ತದೆ.

ಶ್ರೀ ಎಂ.ಸಿ. ನಾಣಯ್ಯ:- ನಾವೂ ರಾಜಕಾರಣದಲ್ಲಿದ್ದೇವೆ; ನೀವೂ ರಾಜಕಾರಣದಲ್ಲಿ ಇದ್ದೀರಿ. ನಾಳೆ ನೀವೂ ಅಧಿಕಾರಕ್ಕೆ ಬರುತ್ತೀರಿ, ಇಂದು ವಿರೋಧ ಪಕ್ಷದಲ್ಲಿದ್ದೀರಿ. ಇಂತಹ ಘಟನೆಗಳು ಹಲ-ವಾರು ಬಾರಿ ಹಲವಾರು ಸಂದರ್ಭಗಳಲ್ಲಿ ಬಂದಿರತಕ್ಕಂಥಾದ್ದನ್ನು ನಾವು ನೋಡಿಕೊಂಡು ಬಂದಿ-ದ್ದೇವೆ. ಆದರೆ ಆ ಘಟನೆಗಳು ನಡೆದಾಗ ಎಲ್ಲೋ ಒಂದು ಕಡೆ ಅದು ಶಮನವಾದಾಗ, ನಾವು ಅದನ್ನು

ಮತ್ತೆ ಎತ್ತುವುದು ಸರಿಯಲ್ಲ. ಬಾಕಿ ಏನೂ ನಾನು ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಸನ್ಮಾನ್ಯ ಉಪಾಧ್ಯಕ್ಷರೇ,. . .

ಉಪಾಧ್ಯಕ್ಷರು:- ತಾವು ಹಿರಿಯ ಸದಸ್ಯರಿದ್ದೀರಿ ಬೇಗನೆ ಮುಗಿಸಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನನಗೆ ಮಾತನಾಡಲು ಅವಕಾಶ ಕೊಡುತ್ತಿಲ್ಲ. ಎಲ್ಲಾ ಸಮಯವನ್ನು ಅವರೇ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ:- ಮಾನ್ಯ ಬೈರೇಗೌಡರ ಬಗ್ಗೆ ಈ ಮಾತನ್ನಾಡಿ ನೆಮ್ಮದಿ ತರುವುದಾದರೆ ಅವರ ಮನಸ್ಸಿಗೆ ನೆಮ್ಮದಿ ಬರುವುದಾದರೆ, ಬಹುಶಃ ಇನ್ನು ಒಂದು ಅರ್ಧ ಗಂಟೆ ಮಾತನಾಡಲಿ. ಮಾನ್ಯ ಬೈರೇಗೌಡರ ವಿಚಾರವನ್ನು ಎತ್ತಿ ನಿಮ್ಮ ಮನಸ್ಸಿಗೆ ಆನಂದ ಬಂದು ನಿಮ್ಮ ಹೃದಯ ಪುಳಕಿತ-ವಾಗುವುದಾದರೆ ಇನ್ನು ಒಂದು ಗಂಟೆ ಮಾತನಾಡಲಿ ನಾವು ಅದನ್ನು ಕೇಳೋಣ.

ಉಪಾಧ್ಯಕ್ಷರು:- ಈಗಾಗಲೇ ತಾವು ಸಾಕಷ್ಟು ಪ್ರಸ್ತಾಪ ಮಾಡಿದ್ದೀರಿ; ಸಾಕಷ್ಟು ಸಮಯ ತೆಗೆದುಕೊಂಡಿದ್ದೀರಿ ಅಯಮಾಡಿ ಇಲ್ಲಿಗೆ ಮುಗಿಸಿ. 25 ನಿಮಿಷ ತಾವು ಮಾತನಾಡಿದ ಮೇಲೆ ಇನ್ನೂ ಮಾತನಾಡಿದರೆ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನೀವೇ ಡಿಸೈಡ್ ಮಾಡಿ.

ಶ್ರೀ ಎಂ. ನಾರಾಯಣಸ್ವಾಮಿ:- ಒಂದು, ನಿಮಿಷ ಅವಕಾಶ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಮಾತನಾಡುವಾಗ ಅವರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದರು, ಅದಕ್ಕೆ ನಾನು ಕುಳಿತುಬಿಟ್ಟೆ. ಪುನಃ ನಾನು ಪ್ರಸ್ತಾಪ ಮಾಡಲಿಕ್ಕೆ ಅವ-ಕಾಶ ಇಲ್ಲವೆಂದರೆ ತಾವು ಹೇಳಿ ಬಿಡಿ.

ಉಪಾಧ್ಯಕ್ಷರು:- ತಾವು ಸಾಕಷ್ಟು ಸಮಯ ಪ್ರಸ್ತಾಪ ಮಾಡಿದ್ದೀರಿ; ಉತ್ತರ ಹೇಳಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇವತ್ತು ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಿಲ್ಲ. ಯಾವ ದಿವಸ ಘಟನೆ ನಡೆಯಿತು ಆ ದಿವಸ ಬರೆದು ಕಳುಹಿಸಿದ್ದೇನೆ. ನಾನು ನಿನ್ನೆ ಪ್ರಾರಂಭ ಮಾಡಿದೆ. ನಾನೇನೂ ಹೊಸದಾಗಿ ಇವತ್ತು ನಿಮ್ಮ ಮುಂದೆ ಕೇಳುತ್ತಿಲ್ಲ. ಇದರ ಸಲುವಾಗಿ 3 ದಿನ ಕುಳಿತು ಇದನ್ನೆಲ್ಲಾ ಬರೆದುಕೊಂಡು ಬಂದು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ನಾಣಯ್ಯನವರಲ್ಲಿ ನಾನು ವಿನಂತಿಸುತ್ತೇನೆ. ಮಧ್ಯೆ ಮಧ್ಯೆ ತಾವು ಪ್ರವೇಶ ಮಾಡುವುದು ಬೇಡ.

ಉಪಾಧ್ಯಕ್ಷರು:- ತಾವು ಹೇಳಿ ಮುಗಿಸಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಈಗ ಇನ್ನೇನೂ ಹೇಳಬೇಕಾಗಿಲ್ಲ; ನೀವೇನು ಮಾಡು-ತ್ತೀರೋ ಮಾಡಿ.

ಉಪಾಧ್ಯಕ್ಷರು:- ಆಯಿತು ಇಲ್ಲಿಗೆ ಈ ವಿಷಯವನ್ನು ಮುಗಿಸೋಣ.

ಶ್ರೀ ಯು.ಆರ್. ಸಭಾಪತಿ:- ಸಂಬಂಧಪಟ್ಟ ಮಂತ್ರಿಗಳು ಅದಕ್ಕೆ ಉತ್ತರ ಕೊಡಬೇಕು.

ಉಪಾದ್ಯಕ್ಷರು:- ಈಗ ಉತ್ತರ ಕೊಡುವ ಆವಶ್ಯಕತೆ ಇಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಈ ಬಗ್ಗೆ ಒಂದು ನಿಮಿಷ ಅವಕಾಶ ಕೊಡಿ. ಈ ಘಟನೆ ಬಗ್ಗೆ ಮಾನ್ಯ ಖರ್ಗೆಯವರೇನು ನಿಲುವಳಿ ಸೂಚನೆ ತಂದಿದ್ದಾರೆ. ಆ ನಿಲುವಳಿ ಸೂಚನೆಯನ್ನು ಅವರು ಸಂಪೂರ್ಣವಾಗಿ ಏನು ಹೇಳಬೇಕೆಂದಿದ್ದಾರೆ ಅದನ್ನು ಹೇಳಲಿ. ಇದು ನಿಲುವಳಿ ಸೂಚನೆ ಇದು ಬರೀ ಮಡಿವಂತಿಕೆಯಾಗುವುದು ಬೇಡ. ಅದರ ಜೊತೆಯಲ್ಲಿ ನಾವೂ ಒಂದೊಂದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡಿ. ಇದನ್ನು ಮಡಿವಂತಿಕೆ ಮಾಡಿ ಆಲ್ಲಿಗೇ ನಿಲ್ಲಿಸಬಾರದು. ಅವರು ಏನು ಹೇಳಬೇಕೆಂದು ಹೇಳುತ್ತಾರೋ ಅದನ್ನು ಹೇಳಿದ ಮೇಲೆ. . . .

ಉಪಾಧ್ಯಕ್ಷರು:- ಶೂನ್ಯ ವೇಳೆಯಲ್ಲಿ ಮಾತನಾಡುವುದು ಇದು. ಮಡಿವಂತಿಕೆ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ನಿಲುವಳಿ ಸೂಚನೆ ಕೊಟ್ಟಿದ್ದೇನೆ ಇವತ್ತು ಕೊಟ್ಟಿಲ್ಲ.

ಶ್ರೀ ವಾಟಾಳ್ ನಾಗರಾಜ್:- ನಿಲುವಳಿ ಸೂಚನೆ ಕೊಟ್ಟಿದ್ದೇವೆಂದು ಅವರು ಹೇಳುತ್ತಿದ್ದಾರೆ. ಅವರು ಸಂಪೂರ್ಣವಾಗಿ ಹೇಳಿ ಮುಗಿಸುವುದಕ್ಕೆ ಅವಕಾಶ ಕೊಡಿ. ಅದಾದ ನಂತರ ನಮಗೂ ಒಂದೊಂದು ನಿಮಿಷ ಈ ನಿಲುವಳಿ ಸೂಚನೆ ಬಗ್ಗೆ ಮಾತನಾಡಲು ಅವಕಾಶ ಕೊಡಬೇಕು.

ಶ್ರೀ ಎಂ. ನಾರಾಯಣಸ್ವಾಮಿ:- ನಮಗೂ ಅವಕಾಶ ಕೊಡಬೇಕು. ಇದು ಸರಿಯಲ್ಲ; ಬರೀ ಕೆಲವರಿಗೆ ಮಾತ್ರ ಅವಕಾಶ ಸಿಗುತ್ತದೆ. ಕೆಲವರಿಗೆ ಮಾತ್ರ ಸೀಮಿತ ಮಾಡಿದ್ದೀರಿ. . .

(ಗೊಂದಲ)

ಉಪಾದ್ಯಕ್ಷರು:- ಸಂಬಂಧಪಟ್ಟಂತಹ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಸಿ. ಬೈರೇಗೌಡ:- ತಮ್ಮಲ್ಲಿ ನನ್ನ ಅತ್ಯಂತ ಕಳಕಳಿಯ ಮನವಿ. . .

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಪೂರ್ತಿ ನಮಗೆ ಹೇಳಲಿಕ್ಕೆ ಅವಕಾಶ ಕೊಟ್ಟಿಲ್ಲ. ಉತ್ತರ ಬೇಡ.

ಉಪಾಧ್ಯಕ್ಷರು:- ತಾವು ಮಾತನಾಡಿ ಮುಗಿಸಿ ಎಂದರೆ ಮಾತನಾಡಲಿಕ್ಕೆ ತಯಾರಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಉತ್ತರವನ್ನೂ ನೀವೇ ಮಾಡಿಕೊಳ್ಳಿ. ಎಲ್ಲಾ ನೀವೇ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಎಂ. ನಾರಾಯಣ ಸ್ವಾಮಿ:- ಇದೊಂದು ಪರಿಪಾಠವಾಗಿಬಿಟ್ಟಿದೆ. ನಮಗೂ ಅವಕಾಶ ಕೊಡಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ನಮ್ಮನ್ನು ಯಾವಾಗ ಕರೆಯುತ್ತೀರಿ?

ಉಪಾಧ್ಯಕ್ಷರು:- ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡಲಾಗಿದೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರೇ, ತಾವು ಪ್ರಸ್ತಾಪ ಮಾಡಿ. ವಿಷಯ ಮುಕ್ತಾಯ ಮಾಡಿದ ಮೇಲೆ ತಾವೇನು ಹೇಳುತ್ತೀರಿ. ಶ್ರೀಮತಿ ಪ್ರಮೀಳಾ ನೇಸರ್ಗಿಯವರನ್ನು ನಾನು ಕರೆದಿದ್ದೇನೆ ಅವರು ಪ್ರಸ್ತಾಪ ಮಾಡಲಿ. ಅವರೂ ಮುಗಿದ ಕೂಡಲೇ ತಮ್ಮನ್ನು ಕರೆಯುತ್ತೇನೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ (ಅ) ದೊಡ್ಡ ಬಳ್ಳಾಪುರದಲ್ಲಿ ಇನ್‌ಕಂಟ್ಯಾಕ್ಸ್ ಅಧಿಕಾರಿಗಳಿಗೆ ವರ್ತಕರಿಂದ ಅವಮಾನ.

+ಶ್ರೀಮತಿ ಪ್ರಮಿಳಾ ನೇಸರ್ಗಿ(ಚಾಮರಾಜಪೇಟೆ):- ನಿನ್ನೆ ದಿವಸ ದೊಡ್ಡಬಳ್ಳಾಪುರದಲ್ಲಿ ಇನ್‌ಕಂ ಟ್ಯಾಕ್ಸ್ ಅಧಿಕಾರಿಗಳು ಹೋಗಿ ವರ್ತಕರ ಮನೆಗೆ ಹೋದಂತಹ ಸಂದರ್ಭದಲ್ಲಿ ಹತ್ತು ಜನ ಹೆಣ್ಣು ಮಕ್ಕಳು ಕೂಡ ಜೊತೆಯಲ್ಲಿ ಹೋಗಿದ್ದರೆಂದು ಕೇಳಲ್ಪಟ್ಟಿದ್ದೇನೆ. ಹೋದ ನಂತರ ಅವರಿಗೆ ಅವಮಾನ ಮಾಡಿ ಹೊರಗೆ ಬರತಕ್ಕಂತಹ ಸಂದರ್ಭದಲ್ಲಿ ಅವರ ಮುಖದ ಮೇಲೆ ಉಗುಳಿರ-ತಕ್ಕಂತಹ ಪರಿಸ್ಥಿತಿಯನ್ನು ನಾವು ಓದಿದ್ದೇವೆ. ಬಹಳ ದುಃಖಕರವಾದ ವಿಷಯ. ಇವತ್ತು ಹೆಣ್ಣು ಮಕ್ಕಳು ಸರ್ಕಾರದಲ್ಲಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಅವರು ಕೆಲಸ ನಿರ್ವಹಣೆ ಮಾಡುವ ಸಂದರ್ಭದಲ್ಲಿ ಅಧಿಕಾರಿಗಳ ಜೊತೆ ಇಂಥ ಸಂದರ್ಭದಲ್ಲಿ ಹೋದಾಗ ಇವರಿಗೆ ಈ ರೀತಿ ಅವಮಾನ ಮಾಡಿದಾಗ ಅಲ್ಲಿಯೇ ಪೋಲೀಸರು ಸಹ ಇದ್ದರು ಎಂದು ನಾನು ಕೇಳಿದ್ದೇನೆ. ನಮ್ಮಲ್ಲಿ ಕಾನೂನು ಮತ್ತು ಸುವ್ಯವಸ್ಥೆಯೇನಾದರೂ ಈ ರಾಜ್ಯದಲ್ಲಿದೆಯೇ ಎನ್ನುವ ಪ್ರಶ್ನೆಯನ್ನು ನಾನು ಇವತ್ತು ಮಾಡ-ಬೇಕಾಗಿದೆ. ಹೆಣ್ಣುಮಕ್ಕಳಿಗೆ ರಕ್ಷಣೆ ಕೊಡಲಾರದ ಪೋಲೀಸರು ಓಡಿಹೋದರು ಎಂದರೆ ಎಂಥ ಪೋಲೀಸರನ್ನು ನಾವು ರೆಕ್ರೂಟ್ ಮಾಡಿಕೊಂಡಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಆದಕಾರಣ ಸನ್ಮಾನ್ಯ ಸಂಬಂಧಪಟ್ಟ ಮಂತ್ರಿಗಳಲ್ಲಿ ಗೃಹ ಸಚಿವರಲ್ಲಿ ಹಾಗೂ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಷಯವನ್ನು ಇವತ್ತು ತಾವು ತಿಳಿಸಬೇಕಾಗಿದೆ. ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಹೆಣ್ಣು ಮಕ್ಕಳು ಅಧಿಕಾರಿಗಳಾಗಿದ್ದಾರೆ. ಅವರುಗಳು ಹೋಗಿ ಕೆಲಸ ಮಾಡುವ ಸಂದರ್ಭದಲ್ಲಿ ಅವ-ರಿಂದ ಆಭರಣವನ್ನು ಕಿತ್ತು ಕೊಂಡಿದ್ದಾರೆ. ಮೈಮೇಲೆ ಉಗುಳಿದ್ದಾರೆ. ಇದು ನಮಗೆ ಬಹಳ ದುಃಖ-ವಾಗುತ್ತದೆ. ಅವರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ ಎಂದು ಕೇಳಿದ್ದೇನೆ. ಹೆಣ್ಣುಮಕ್ಕಳಿಗೆ ರಕ್ಷಣೆ